ಸಭಾಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ ನವರು) ಪೀಠವನ್ನಲಂಕರಿಸಿದ್ದರು.

(ಸದನವು ಮಧ್ಯಾಹ್ನ 12-40ಕ್ಕೆ ಪುನರ್ ಸಮಾವೇಶಗೊಂಡಿತು)

(ಬಿ.ಜೆ.ಪಿ., ಜೆ.ಡಿ (ಯು), ಜೆ.ಡಿ. (ಎಸ್) ಪಕ್ಷಗಳ ಮಾನ್ಯ ಸದಸ್ಯರುಗಳು ಧರಣಿನಿರತರಾಗಿದ್ದಾರು)

ಅಧ್ಯಕ್ಷರು :— ಸರ್ಕಾರದವರು ಮತ್ತು ವಿರೋಧ ಪಕ್ಷದ ನಾಯಕರು ನಮ್ಮ ಕಛೇರಿಯಲ್ಲಿ ಸೇರಿ ಯಾವುದೋ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಅದರ ಸ್ಟೇಟ್‌ಮೆಂಟ್‌ನ್ನು ಮಾನ್ಯ ಕಾನೂನು ಸಚಿವರು ಈಗ ಸದನದಲ್ಲಿ ಮಾಡುತ್ತಾರೆ. ಆದುದರಿಂದ ಧರಣಿನಿರತ ಎಲ್ಲಾ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಂಡರೆ ಒಳ್ಳೆಯದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಅಧ್ಯಕ್ಷರೆ, ಮೊದಲು ಸಚಿವರು ಸ್ಟೇಟ್‌ಮೆಂಟ್ ಮಾಡಲಿ.

2. ಮಂತ್ರಿಗಳಿಂದ ಹೇಳಿಕೆ.

ವಿಷಯ: ರೈತರ ಸಾಲದ ಮೇಲಿನ ಬಡ್ಡಿ ಮನ್ನ ಬಗ್ಗೆ ನಡೆದ ಚರ್ಚೆಗೆ ಉತ್ತರ.

+ ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೆ, ಅನೇಕ ಬಾರಿ ನಾವು ಪ್ರತಿಪಕ್ಷಗಳ ನಾಯಕರ ಜೊತೆ ಸಭೆ ನಡೆಸುವ ಬಗ್ಗೆ ಚರ್ಚೆ ಮಾಡಿದ್ದೇವೆ. ಈಗಾಗಲೇ ಬರಗಾಲ ಹೆಚ್ಚಾಗಿರುವ ಭಾಗಗಳಿಂದ ಬರುವ ಶಾಸಕರು ತಮ್ಮ ಪ್ರದೇಶಗಳಲ್ಲಿ ಜನರು ಹೆಚ್ಚು ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಾರೆ; ಹೀಗಿರುವಾಗ ನಾವು ಇಲ್ಲಿ ಧರಣಿ ನಡೆಯುತ್ತಿರುವುದರಿಂದ ಶಾಸನ ಸಭೆಯಲ್ಲೂ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ, ಆತ್ಮಕಡೆ ನಮ್ಮ ಕ್ಷೇತ್ರಗಳಿಗೆ ಹೋಗುವುದಕ್ಕೆ ಆಗುತ್ತಿಲ್ಲವೆಂದಿದ್ದಾರೆ. ಈ ಬಗ್ಗೆ ಹೆಚ್ಚು ಒತ್ತಡಗಳು ಈಗಾಗಲೇ ಬರತೊಡಗಿವೆ. ಈ ವಿಷಯವನ್ನು ಅಧ್ಯಕ್ಷರಾದ ತಮ್ಮ ಗಮನಕ್ಕೂ ತಂದಿದ್ದೇವೆ. ಇನ್ನು ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಮತ್ತು ಇನ್ನೂ ಅನೇಕ ಹಿರಿಯ ಸದಸ್ಯರುಗಳು ಮಾತನಾಡಿ ಸರ್ಕಾರದವರು ಸದನಕ್ಕೆ ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆಂದೂ ಮತ್ತು ಸರ್ಕಾರ ಹಠಮಾರಿತನದ ಧೋರಣೆಯನ್ನು ತಾಳಿದೆಯೆಂದು ಹೇಳಿದ್ದಾರೆ. ಇದಲ್ಲದೆ ರಾಜ್ಯ ಸರ್ಕಾರ ತನ್ನ ಕೆಲಸವನ್ನು ಸರಿಯಾದ ರೀತಿಯಲ್ಲಿ ನಿರ್ವಾಹಣೆ ಮಾಡಿಲ್ಲವೆಂದೂ ಕೂಡ ಅನೇಕ ಆಪಾದನೆಗಳನ್ನು ಮಾಡಿದ್ದಾರೆ. ಆಪಾದನೆ ಮಾಡುವ ಅವರ ಹಕ್ಕಿನ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರಿಗೆ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಅದಕ್ಕೆ ಅವರು

ಉತ್ತರ ಕೊಡಬೇಕು. ಜವಾಬ್ದಾರಿ ಎನ್ನುವುದು ನಮ್ಮದು ಮಾತ್ರವಲ್ಲ, ಕೇಂದ್ರ ಸರ್ಕಾರ ಕೂಡ ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಬೇಕಾಗುತ್ತದೆ. ನಮ್ಮವರೇ ಕೇಂದ್ರದಲ್ಲಿ ಮಂತ್ರಿಗಳಾಗಿದ್ದಾರೆ. ವಿಶೇಷವಾಗಿ ಶ್ರೀ ಮಾನ್ ನಾಯ್ಡು ರವರು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಿಗಳಾಗಿದ್ದಾರೆ. ಇಷ್ಟೇ ಅಲ್ಲದೇ ಅನೇಕ ಜನರು ಕೇಂದ್ರದ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳಾಗಿದ್ದಾರೆ. ಅವರು ಮನಸ್ಸು ಮಾಡಿದರೆ ಕೇಂದ್ರ ಸರ್ಕಾರದ ನೆರವನ್ನು ಹೆಚ್ಚು ಕೊಡಿಸುವುದಕ್ಕೆ ಸಹಾಯಕವಾಗುತ್ತದೆ. ಅವರುಗಳು ಕೂಡ ಪ್ರವಾಸ ಮಾಡಬೇಕಾಗಿತ್ತು ಮತ್ತು ಬರಗಾಲದ ಪರಿಸ್ಥಿತಿಯ ಬಗ್ಗೆ ಅವರುಗಳೂ ಕೂಡ ತಿಳಿದುಕೊಳ್ಳಬೇಕಾಗಿತ್ತು. ಆದರೆ ಅವರು ಏಕೆ ಆ ಕೆಲಸವನ್ನು ಮಾಡಲಿಲ್ಲ? ನಾನು ಅವರುಗಳ ಬಗ್ಗೆ ಅಪಾದನೆ ಮಾಡುತ್ತಿಲ್ಲ. ಆದರೆ ಜವಾಬ್ದಾರಿಕೆ ವಿಷಯದ ಬಗ್ಗೆ ಹೇಳುವ ಸಂದರ್ಭ ಬಂದಿರುವುದರಿಂದ ನಾನು ಹೇಳಲೇಬೇಕಾಗಿದೆ. ನಮ್ಮ ನಮ್ಮ ಜವಾಬ್ದಾರಿಯನ್ನು ನಿಭಾಯಿಸುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನ ಪ್ರತಿನಿಧಿಗಳು, ಮುಖಂಡರುಗಳಿಂದ ಆಗಬೇಕು ಎನ್ನುವ ಉದ್ದೇಶದಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ನಮ್ಮವರೇ ಆದ ಕೇಂದ್ರದ ಮಂತ್ರಿಗಳೂ ಕೂಡ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿತ್ತೆಂದು ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುವುದಕ್ಕೆ ನಾನು ಈ ವಿಷಯದ ಪ್ರಸ್ತಾಪವನ್ನು ಮಾಡಿದೆ. ಮಾನ್ಯ ಅಧ್ಯಕ್ಷರೆ, ತಳೆದ ಒಂದು ವಾರದಿಂದ ನಾವು ಬರಗಾಲದ ಬಗ್ಗೆ ಚರ್ಚೆ ಮುಂದುವರಿಸಿ ಕೆಲವು ವಿಚಾರಗಳ ಬಗ್ಗೆ ಸರ್ಕಾರ ಏನು ನಿರ್ಧಾರಗಳನ್ನು ತೆಗೆದುಕೊಂಡಿದೆ ಎನ್ನುವುದಕ್ಕೆ ಸಂಬಂಧಪಟ್ಟಂತೆ ಈಗಾಗಲೇ 15 ಅಂಶಗಳ ಕಾರ್ಯ ಸೂಚಿಯನ್ನು ಸದನದ ಮುಂದೆ ಇಟ್ಟಿದ್ದೇವೆ. ಈ ದಿವಸ ಪುನ: ಎರಡು ಮೂರು ವಿಷಯಗಳ ಬಗ್ಗೆ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿಶೇಷವಾಗಿ ಮೆಕ್ಕೆಜೋಳವನ್ನು ಏನು ಖರೀದಿ ಮಾಡಲಾಗಿದೆ ಅದಕ್ಕೆ ಇನ್ನೂ ದುಡ್ಡು ಕೊಟ್ಟಿಲ್ಲವೆಂದಿದ್ದಾರೆ. ಆದುದರಿಂದ ತಕ್ಷಣ ಅದಕ್ಕೆ ಹಣವನ್ನು ಕೊಡಿ ಎಂದು ಸಹಜವಾಗಿ ಹೇಳಿದ್ದಾರೆ. ಕೇಂದ್ರ ಸರ್ಕಾರದ ನೆರವನ್ನು ಕಾಯದೆ ರಾಜ್ ಸರ್ಕರಕ್ಕೆ ಸಂಪನ್ಮೂಲಗಳ ಕೊರತೆ ಇದ್ದರೂ ಕೂಡ ಆವರ್ತ ನಿಧಿಯಿಂದ ಸುಮಾರು 80 ಕೋಟಿ ರೂ.ಗಳನ್ನು ಕೊಡಲಾಗಿದೆ. ಇದಕ್ಕಾಗಿ ನಾವು ಕೇಂದ್ರ ಸರ್ಕಾರದ ನೆರವನ್ನು ಕಾಯಲಿಲ್ಲ. ಒಟ್ಟಾರೆ 170 ಕೋಟಿ ರೂ.ಗಳ ಮೆಕ್ಕೆಜೋಳವನ್ನು ಖರೀದಿ ಮಾಡಿದ್ದೇವೆ. ಈ ಖರೀದಿಗಾಗಿ ಕೇಂದ್ರ ಸರ್ಕಾರದಿಂದ 100 ಕೋಟಿ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದೆ. ಇನ್ನು ಕೇಂದ್ರ ಸರ್ಕಾರದಿಂದ ಈ ಸಂಬಂಧವಾಗಿ 64 ಕೋಟಿ ರೂ.ಗಳು ಬಿಡುಗಡೆಯಾಗಬೇಕು. ಇದರ ಜೊತೆಗೆ ಹ್ಯಾಂಡ್ಲಿಂಗ್ ಛಾರ್ಜಸ್ ಕೂಡ 10 ಕೋಟಿ ರೂ.ಗಳು ಬಿಡುಗಡೆಯಾಗಬೇಕು. ಒಟ್ಟಾರೆಯಾಗಿ ಇನ್ನೂ 74 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಬೇಕಾಗಿದೆ. ಆದರೆ ಇದು ಇನ್ನೂ ಬಿಡುಗಡೆಯಾಗದಿದ್ದರೂ ಕೂಡ ಇನ್ನೂ 5 ಕೋಟಿ 82 ಲಕ್ಷ ರೂ.ಗಳನ್ನು ಏನು ಹಣ ಬಿಡುಗಡೆ ಮಾಡಬೇಕಾದ ಬಾಕಿ ಇದೆ ಅದನ್ನು ಬಿಡುಗಡೆ ಮಾಡಿ ಎಂದು ಮುಖ್ಯಮಂತ್ರಿಗಳು ಆದೇಶ ಮಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮೊನ್ನೆ ದಿವಸ ಕೃಷಿ ಸಚಿವರು ಮಾತನಾಡುವಾಗ ಪೂರ್ಣ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದರು. ಇಂದು ನೀವು ನೋಡಿದರೆ ಇನ್ನೂ 5 ಕೋಟಿ ರೂ.ಗಳು ಬಿಡುಗಡೆ ಮಾಡಬೇಕು ಎಂದು ಹೇಳಿತ್ತೀರಿ. ಸದನಕ್ಕೆ ನಿಜವಾದ ಮಾಹಿತಿಯನ್ನು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು) :— 10 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆಂದು ಅವರು ಹೇಳಿದ್ದರು. ಬಿಡುಗಡೆ ಆಗಿರುವುದು ತಮಗೂ ಕೂಡ ಗೊತ್ತೇ ಇದೆ. ಇನ್ನೂ 5 ಕೋಟಿ 82 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲು ಮುಖ್ಯಮಂತ್ರಿಗಳು ಆದೇಶ ಕೊಟ್ಟಿದ್ದಾರೆ. ಈ ದಿವಸ ಆ ಹಣವನ್ನು ಬಿಡುಗಡೆ ಮಾಡುತ್ತೇವೆ. ಇನ್ನು ಮತ್ತೊಂದು ಪ್ರಮುಖವಾದ ಬೇಡಿಕೆಯನ್ನು ವಿರೋಧ ಪಕ್ಷದವರು ಇಟ್ಟ 100 ಕೋಟಿ ರೂ.ಗಳನ್ನು ಕುಡಿಯುವ ನೀರಿನ ಸಲುವಾಗಿ ಹಾಗೂ ಬರ ಪರಿಹಾರ ಕಾಮಗಾರಿಗಳ ನಿರ್ವಹಣೆಗಾಗಿ ಬಿಡುಗಡೆ ಮಾಡಬೇಕೆಂದು ಹೇಳಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಸಹಜವಾಗಿ ಈ ಬೇಡಿಕೆಯನ್ನು ಇಟ್ಟಿದ್ದಾರೆ. ಈಗಾಗಲೇ 35 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂಬುದನ್ನು ಕಂದಾಯ ಮಂತ್ರಿಗಳು ಸದನದಲ್ಲಿ ಹೇಳಿದ್ದಾರೆ. ಕಂದಾಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಇದರ ಜೊತೆಗೆ 20 ಕೋಟಿ ರೂ.ಗಳನ್ನು ಬಿಡುಗಡೆ ಮಾಡುತ್ತೇವೆಂದು ಆಶ್ವಾಸನೆಯನ್ನು ಸಭೆಯ ಮೂಲಕ, ಮಾನ್ಯ ಅಧ್ಯಕ್ಷರ ಮೂಲಕ ಜನರಿಗೆ ಮಾತು ಕೊಟ್ಟಿದ್ದಾರೆ. ಈಗ ಅವರು ಹೇಳಿರತಕ್ಕಂಥದ್ದರ ಜೊತೆಗೆ 45 ಕೋಟಿ ರೂ.ಗಳನ್ನು ಆಗತ್ಯ ಬಿದ್ದಾಗ, ಯಾವ ಕಾಲಮಿತಿಯೂ ಇದಕ್ಕೆ ಇಲ್ಲದೇ ಸರ್ಕಾರ ಬಿಡುಗಡೆ ಮಾಡಲು ಸಿದ್ಧವಿದೆ ಎಂದು ಹೇಳಿದ್ದಾರೆ. ಇನ್ನು ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ ಈ ವಿಷಯದ ಬಗ್ಗೆ ಎರಡು ಮೂರು ಅಂಶಗಳ ಪ್ರಸ್ತಾವನ್ನು ಮಾಡಿದ್ದಾರೆ. ಬಹಳ ಮುಖ್ಯವಾಗಿ ವಿದ್ಯುತ್ ಡಿಸ್-ಕನೆಕ್ಟ್ ಮಾಡುತ್ತಿದ್ದಾರೆಂದು ಮತ್ತು ಬಹಳ ವಿಶೇಷವಾಗಿ ಹಣ ವಸೂಲಿ ಮಾಡುತ್ತಿದ್ದಾರೆ ಎಂದು ಹೇಳಿದ್ದಾರಲ್ಲದೆ ಹೊಸದಾಗಿ ವಿದ್ಯುತ್ ಸಂಪರ್ಕವನ್ನು ಗ್ರೇ ಹಾಗೂ ಡಾರ್ಕ್ ಏರಿಯಾಗಳಲ್ಲಿ ಕೊಡುತ್ತಿಲ್ಲವೆಂದು ಮಾನ್ಯ ಬೈರೇಗೌಡರು ಹೇಳಿದ್ದಾರೆ. ಅನಧಿಕೃತ ಪಂಪ್‌ಸೆಟ್ಟ್‌ಗಳ ಬಗ್ಗೆ ಅಕ್ರಮ ಸಕ್ರಮಗೊಳಿಸುವುದಕ್ಕೆ ಡಾರ್ಕ್ ಮತ್ತು ಗ್ರೇ ಏರಿಯಾಗಳಲ್ಲಿ ಇನ್ನು ಮುಂದೆ ಅವಕಾಶ ಮಾಡಿಕೊಡುತ್ತೇವೆಂದು ವಿಶೇಷವಾಗಿ ಹೇಳುತ್ತಿದ್ದೇನೆ. ಈ ಬಗ್ಗೆ ಕೆ.ಪಿ.ಟಿ.ಸಿ.ಎಲ್. ಜೊತೆ ಚರ್ಚೆ ಮಾಡಿದ್ದೇವೆ. ಇದಕ್ಕಾಗಿ ಹೊಸ ಯೋಜನೆ ತಯಾರು ಮಾಡಿದ್ದೇವೆ. ಇದರಲ್ಲಿರುವ ಕೆಲವೊಂದು ತಾಂತ್ರಿಕವಾದ ದೋಷಗಳನ್ನು ಸರಿಪಡಿಸಿಕೊಂಡು ತಕ್ಷಣ ವಿದ್ಯುತ್ ಕನೆಕ್ಷನ್ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೇವೆ.

(ಗೊಂದಲ)

ನಾವು ಪಂಪ್‌ಸೆಟ್‌ಗಳಿಗೆ ಸರ್ವಿಸ್ ಕೊಡಬೇಕೆಂದು ಆದೇಶವನ್ನು ಕೊಟ್ಟಿದ್ದೇವೆನ್ನುವಂತಹ ಮಾತನ್ನು ಹೇಳಿದ್ದೇವೆ. ಈ ವಿಚಾರವಾಗಿ ಹಿಂದೆ ಏನಾಗಿದೆ ಎಂದರೆ ಅಕ್ರಮವಾಗಿರುವಂತಹ ಪಂಪ್‌ಸೆಟ್‌ಗಳನ್ನು ಸಕ್ರಮ ಮಾಡಿಕೊಳ್ಳಬೇಕೆನ್ನುವಂತಹ ಮಾತನ್ನು ಹೇಳಿದರೂ ಕೂಡ ಅನೇಕರು ಇದನ್ನು ಮಾಡಿಕೊಂಡಿಲ್ಲ. ಈ ರೀತಿ ಅವರು ಮಾಡಿಕೊಂಡಿದ್ದರೆ ಈ ತೊಂದರೆ ಬರುತ್ತಾ ಇರಲಿಲ್ಲ. ಇಂತಹ ಪಂಪ್‌ಸೆಟ್‌ಗಳ ವಿಚಾರವಾಗಿ ನಾವು "ತತ್ಕಾಲ್ ಯೋಜನೆ" ಯೊಳಗೆ 25 ಸಾವಿರ ರೂಪಾಯಿಗಳು ಕೊಡುವ ಉದ್ದೇಶ ಏನು ಇದೆ, ಅದು ಪ್ರಮುಖವಾದದ್ದು, ಇಲ್ಲಿ ಯಾರು ಅಕ್ರಮವಾಗಿ ಮಾಡಿಕೊಂಡಿದ್ದಾರೋ ಅವರು ಸಕ್ರಮ ಮಾಡಿಕೊಳ್ಳುವುದಕ್ಕೆ ಒಂದು ಅವಕಾಶವಿರಲಿ ಎಂದು ನಾವು ಇದನ್ನು ಮಾಡಿದೆವು. ಆದರೆ ಇದನ್ನು ತಾವು ಎಲ್ಲರೂ ತೆಗೆದುಹಾಕಬೇಕೆಂದು ಹಾಳಿದ್ದೀರಿ, ಅದನ್ನು ನಾವು ತೆಗೆದುಹಾಕಿದ್ದೇವೆ. ಇಲ್ಲಿ ಮುಖ್ಯವಾದ ವಿಚಾರವೆಂದರೆ ಅಕ್ರಮವಾದಂತಹ ಪಂಪ್‌ಸೆಟ್‌ಗಳನ್ನು ಹಾಕಿಕೊಂಡು ವಿದ್ಯುತ್ ತೆಗೆದು ಕೊಂಡಿರುವುದು ಬೇರೆ, ನಾನು ಹೇಳುವಂಥಾದ್ದು ಅಕ್ರಮವಾಗಿ ತೆಗೆದುಕೊಂಡಿರುವವರಿಗೆ ಸರಿಯಾದಂತಹ ಕ್ವಾಲಿಟಿ ಪವರ್ ಕೊಡುವುದಕ್ಕಾಗುವುದಿಲ್ಲ. ಈ ಕಾರಣಕ್ಕಾಗಿ ಯಾರು ಯಾರು ಅಧಿಕೃತವಾಗಿ, ನ್ಯಾಯವಾಗಿ ಯಾರು ಪಂಪ್‌ಸೆಟ್ ಇರುವವರು ಹಾಗೂ ಸಕ್ರಮಗೊಂಡವರಿಗೆ ಯಾವ ಕಾರಣಕ್ಕೂ ವಿದ್ಯುಚ್ಛಕ್ತಿಯನ್ನು ತೆಗೆಯಬಾರದೆಂಬ ಆದೇಶವನ್ನು ಮಾನ್ಯ ಮುಖ್ಯಮಂತ್ರಿಯವರು ಈ ದಿನ ಕೊಟ್ಟಿದ್ದಾರೆಂಬ ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಅಧ್ಯಕ್ಷರೇ, ಇನ್ನು ಮತ್ತೊಂದು ವಿಚಾರವೇನೆಂದರೆ ವಿದ್ಯುತ್ ಬಳಕೆಯ ಬಾಕಿ ಹಣವನ್ನು ಕೊಡದೇ ಉಳಿಸಿಕೊಂಡಿರುವಂತಹ ರೈತರು ಅಸಲು ಹಣವನ್ನು ಕೊಟ್ಟಲ್ಲಿ ಅವರ ಪೂರ್ತಿ ಬಡ್ಡಿಯನ್ನು ನಮ್ಮಾ ಮಾಡುವಂತಹ ಯೋಜನೆಯನ್ನು ಜಾರಿಗೆ ತಂದಿದ್ದೆವು. ಇದಕ್ಕೆ ಆಗಸ್ಟ್ 14ನೇ ತಾರೀಖಿನವರೆಗೆ ಸಮಯವನ್ನು ಕೊಟ್ಟಿದ್ದೇವೆ, ಮತ್ತೆ ಆಗತ್ಯ ಬಂದರೆ ಈ ಪಂಪ್‌ಸೆಟ್‌ಗಳನ್ನು ಹೊಂದಿರುವಂತಹ ವ್ಯಕ್ತಿಗಳು ಸಕ್ರಮ ಮಾಡಿಕೊಳ್ಳು ಸಮಯ ವಿಸ್ತರಿಸಬೇಕೆಂಬ ಆಗತ್ಯತೆ ಕಂಡು ಬಂದರೆ ಅದನ್ನು ಮಾಡುವಂಥಾದಕ್ಕೆ ಕೂಡ ನಾವು ಆಲೋಚನೆ ಮಾಡಿದ್ದೇವೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು

(ಗೊಂದಲ)

ಕೆ.ಪಿ.ಟಿ.ಸಿ.ಎಲ್‌ಗೆ ಆದೇಶವನ್ನು ಕೊಟ್ಟಿದ್ದಾರೆ. ಈಗ ಯಾವ ಪಂಪ್‌ಸೆಟ್‌ಗಳು ಅಧಿಕೃತವಾಗಿ ಇವೆಯೋ, ಅವುಗಳಿಗೆ ಡಿಸ್-ಕನೆಕ್ಟ್ ಮಾಡಬಾರದೆಂಬ ಆದೇಶವನ್ನು ಕೊಟ್ಟಿದ್ದೇವೆ. ಈಗಾಗಲೇ ಸಾಕಷ್ಟು ವಿಚಾರಗಳನ್ನು ಮೊನ್ನೆ ಶುಕ್ರವಾರದಂದು 15 ಅಂಶಗಳ ಕಾರ್ಯಕ್ರಮಗಳ ಪಟ್ಟಿಯನ್ನು ಸದನದ ಮುಂದಿಟ್ಟಿದ್ದೇವೆ. ಇದರ ಜೊತೆಗೆ ಮಾನ್ಯ ಸದಸ್ಯರುಗಳು

ಹೇಳಿದಂತಹ ವಿಷಯಗಳನ್ನು ಮತ್ತು ಸಾಲ ಬಡ್ಡಿ ಮನ್ನಾ ವಿಚಾರಗಳು ಸಾಕಷ್ಟು ಹೇಳಿದ್ದಾರೆ. ಇದರ ಬಗ್ಗೆ ನಮ್ಮ ಸರ್ಕಾರ ಕೊಡುವಂತಹ ಮಾಹಿತಿಗಳು ಟ್ರಾನ್‌ಫರೆನ್ಸಿ ಆಕ್ಟ್ ಮತ್ತು ರೈಟ್ ಟು ಇನ್‌ಫರ್‌ಮೇಶನ್ ಆಕ್ಟ್‌ನಲ್ಲಿ ಇದೆ. ಇದರಿಂದ ಯಾರಿಗೆ

(ಗೊಂದಲ)

ಬೇಕಾದರೂ ಮಾಹಿತಿ ದೊಯುತ್ತದೆ. You have every right to get the information. ಆ ಇನ್‌ಫರ್‌ಮೇಷನ್ ಅನ್ನು ನಾವು ತೆಗೆದುಕೊಳ್ಳಬಹುದು. ಮಾನ್ಯ ಸಹಕಾರಿ ಸಚಿವರು ಶೇ.70ರಷ್ಟು ವಸೂಲಾಗಿದೆ ಎಂದು ಹೇಳಿದರೆ, ನೀವು ಸುಳ್ಳು ಎಂದು ಹೇಳುತ್ತಿದ್ದೀರಿ, ಎಂದು ನೀವು ಹೇಳಿದರೆ ಮಸೂದೆಗೆ ಯಾವ ಬೆಲೆಯೂ ಇಲ್ಲದ ಹಾಗೆ ಆಗುತ್ತದೆ. ನಾವು ಟ್ರಾನ್‌ಫರೆನ್ಸಿ ಆಕ್ಟಿನಲ್ಲಿ ಹೇಳಿದ್ದೇವೆ. ತಾವು ಈ ಎರಡು ಆಕ್ಟ್‌ಗಳನ್ನು ಬಳಸಿಕೊಂಡು ಸತ್ಯಾಸತ್ಯತೆಗಳು ಎನೆಂಬುವುದನ್ನು ನೋಡಿಕೊಳ್ಳುವುದಕ್ಕೆ ಸಾಧ್ಯವಿದೆ. ಸದನದಲ್ಲಿ ಮಾನ್ಯ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆ ಕೊಟ್ಟರೆ ನೀವು ಅದನ್ನು ಪ್ರಶ್ನೆ ಮಾಡುತ್ತಾ ಹೋದರೆ ಈ ಜನತಂತ್ರ ವ್ಯವಸ್ಥೆ ಎಲ್ಲಿಗೆ ಹೋಗುತ್ತದೆಯೋ, ಅದು ನನಗೆ ಗೊತ್ತಿಲ್ಲ. ಅದುದರಿಂದ ನಾನು ತಮ್ಮ ಮೂಲಕ ಮಾನ್ಯ ಹಿರಿಯ ಸದಸ್ಯರುಗಳಲ್ಲಿ, ನುರಿತ ಸದಸ್ಯರುಗಳಲ್ಲಿ ಹಾಗೂ ಸರ್ಕಾರವನ್ನು ನಡೆಸಿರುವಂತಹ ಅನುಭವಿಗಳು ಯಾರಿದ್ದಾರೆ, ಅವರ ಬಾಯಲ್ಲಿ ಈ ಮಾತು ಬರಬಾರದು. ಇದು ಸದನದ ಹಿತ ದೃಷ್ಟಿಯಿಂದ ಒಳ್ಳೆಯದಲ್ಲವೆಂದು ನಾನು ಅಂದುಕೊಂಡಿದ್ದೇನೆ. ಅದರ ಅನುಭವದ ಆಧಾರದ ಮೇಲೆ ತಮ್ಮ ಮುಖೇನ ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ತಾವು ಸರ್ಕಾರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ, ಎಲ್ಲರೂ ರೈತರ ಮೂಲಕವೇ ಆರಿಸಿ ಬಂದಿರುವಂಥಾದ್ದು, ಸರ್ಕಾರಗಳು ರೈತರಿಂದಲೇ ಆಯ್ಕೆಯಾಗಿರುವಂಥಾದ್ದು. ನಾವು ಅವರ ಆದೇಶವನ್ನು ಪಾಲಿಸದೆ, ಅಪರಾಧ ಮಾಡುವುದಕ್ಕೆ ಸಾಧ್ಯವಿಲ್ಲ. ಈ ರೀತಿ ಮನಸ್ಸು ಮಾಡಲು ಸಾಧ್ಯವಿಲ್ಲ. ಆ ದೃಷ್ಟಿಯಿಂದ ನಾನು ಇಷ್ಟು ವಿಚಾರಗಳನ್ನು ತಮ್ಮ ಮೂಲಕ ಮಾನ್ಯ ಸದಸ್ಯರುಗಳಿಗೆ ಹೇಳುತ್ತೇನೆ. ಇನ್ನು ನಾವು ಈ ಸದನವನ್ನು ನಡೆಸುವ ವಿಚಾರವಾಗಿ ಮಾನ್ಯ ಸದಸ್ಯರುಗಳು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಾವು 31ನೇ ತಾರೀಖಿನವರೆಗೆ ಸದನವನ್ನು ಮುಂದುವರೆಸಿಕೊಂಡು ಹೋದರೆ ನಮ್ಮ ಕ್ಷೇತ್ರಗಳಲ್ಲಿ ಜನರು ನಮ್ಮನ್ನು ಸೇರಿಸುವುದಿಲ್ಲವೆಂದು ಹೇಳುತ್ತಿದ್ದಾರೆ. ಅಲ್ಲಿ ತೀವ್ರವಾದಂತಹ ಬರಗಾಲ ಪರಿಸ್ಥಿತಿ ಇದ್ದು, ಅಲ್ಲಿ ನಾವು ಕೆಲಸ ಮಾಡುವುದುಕ್ಕೆ ಅವಕಾಶ ಮಾಡಿಕೊಡಿ ಎಂದು ಹೇಳುತ್ತಿದ್ದಾರೆ. ನಾವು ಇಲ್ಲಿ ಸಂವಿಧಾನಬದ್ಧರಾಗಿ ಕೆಲಸಗಳನ್ನು ಪೂರೈಸದ ಹೊರತು ನಾವು ಸದನವನ್ನು ಮುಂದಕ್ಕೆ ಹಾಕುವುದಕ್ಕೆ ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ಈಗ ಇರುವಂತಹ ಕೆಲವು ದಿವಸಗಳನ್ನು ಸದುಪಯೋಗಪಡಿಸಿಕೊಳ್ಳಲು ತಾವೆಲ್ಲರೂ ಸಹಕಾರ ನೀಡಬೇಕೆಂದು ಮಾನ್ಯ ವಿರೋಧ

ಪಕ್ಷದ ನಾಯಕರನ್ನು ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರನ್ನು, ಹಾಗೂ ಇತರ ಪಕ್ಷದ ಮುಖಂಡರುಗಳನ್ನು ಮತ್ತು ಸದಸ್ಯರುಗಳನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :— ಈಗ ಸರ್ಕಾರದಿಂದ ಬಂದಂತಹ ಉತ್ತರದಿದಂದ ಸಂತೋಷವಾಯಿತಾ?

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು :— ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರೇಗೌಡರು ಕೆಲವೊಂದು ವಿಷಯಗಳ ಬಗ್ಗೆ ಹಾಗೂ ಪ್ರಮುಖ ಬೇಡಿಕೆಗಳಿಗೆ ಸ್ಪಂದನೆ ಮಾಡಿಲ್ಲ. ಅವರು ಯಾವುದಕ್ಕೆ ಸ್ಪಂದಿಸಿದ್ದಾರೆ, ಅದಕ್ಕೆ ನಾನು ಅಭಿನಂದನೆಯನ್ನು ಹೇಳುತ್ತೇನೆ. ಇಲ್ಲಿ ಸರ್ಕಾರ ಹಾಗೂ ಪ್ರತಿಪಕ್ಷದವರು ಕೊಡಿಕೊಂಡು ರೈತರ ಪರವಾಗಿ ಹೋರಾಟ ಮಾಡುತ್ತಿದ್ದೇವೆ. ಕೆಲವೊಂದು ಬೇಡಿಕೆಗಳಿಗೆ ಸರ್ಕಾರ ಸ್ಪಂದಿಸಿದೆ, ಮಾನ್ಯ ಸಚಿವರು ಮೆಕ್ಕೆಜೋಳ ಬಾಕಿ ಇನ್ನು 5 ಕೋಟಿ ರೂಪಾಯಿಗಳ ಬಾಕಿ ಇದೆ ಎಂದು ಹೇಳಿದ್ದಾರೆ. ಈ ವಿಚಾರವಾಗಿ ಹಿಂದೆ ಸದನದಲ್ಲಿ ಚರ್ಚೆ ನಡೆದಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಆಗಿದೆ, ಎಷ್ಟು ಬಾಕಿ ಇದೆ; ನಿಮ್ಮ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಮಾಡಿದ್ದೀರೆಂಬ ಬಗ್ಗೆ ಕೇಳಿದ್ದಕ್ಕೆ ಮೊನ್ನೆ ದಿವಸ ಸದನದಲ್ಲಿ ರಿಪ್ಲೈ ಬಂದಿದೆ. ಇವರು ನಮ್ಮ ಸರ್ಕಾರದಿಂದ ಎಲ್ಲಾ ಹಣ ಬಿಡುಗಡೆ ಮಾಡಿದ್ದೇರೆಂದು ಹೇಳಿದ್ದಾರೆ. ನಾನು ಕೆಲವು ತಾಲ್ಲೂಕುಗಳಿಗೆ ಹೋದಂತಹ ಸಂದರ್ಭದಲ್ಲಿ, ನವಲಗುಂದ, ನರಗುಂದ ತಾಲ್ಲೂಕುಗಳಿಗೆ ಹೋದಂತಹ ಸಂದರ್ಭದಲ್ಲಿ ರೈತರು ಹಣ ಬಂದಿಲ್ಲವೆಂದು ಹೇಳಿದ್ದಾರೆ, ಅದೇ ರೀತಿಯಲ್ಲಿ ದಾವಣಗೆರೆ, ಚಿತ್ರದುರ್ಗದ ಶಾಸಕರು ಇನ್ನು ಹಣ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಇನ್ನು ಹತ್ತಾರು ಕೋಟಿ ರೂಪಾಯಿಗಳ ಬಾಕಿ ಇದೆ, ಎನ್ನುವಂತಹ ವಿಚಾರವು ಇದೆ. ಆದುದರಿಂದ ಇದರ ಬಗ್ಗೆ ಸದನದಲ್ಲಿ ಸ್ಪಷ್ಟಿಕರಣವಾಗಬೇಕು. ಮತ್ತೆ ರೈತರಿಗೂ ಮೆಸೇಜ್ ಹೋಗಬೇಕೆನ್ನುವ ದೃಷ್ಟಿಯಿಂದ ನಾನು ಒತ್ತಾಯ ಮಾಡುತ್ತಿದ್ದೇನೆ. ಈ 5 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ತಕ್ಷಣವೇ ಬಿಡುಗಡೆ ಮಾಡುತ್ತಾರೆಂದು ಮಾನ್ಯ ಚಂದ್ರೇಗೌಡರು ಹೇಳಿದ್ದಾರೆ. ಇವತ್ತು ಈ ರೀತಿಯ ಘೋಷಣೆಯಾಗಿ ಅದು ಒಂದು ವಾರ, 15 ದಿವಸಗಳು ಆದರೆ ಅಲ್ಲಿ ರೈತರು ಸಾಯುತ್ತಿದ್ದಾರೆ. ಆದುದರಿಂದ ತಾವು ಇವತ್ತು ಏನು ಘೋಷಣೆ ಮಾಡಿದ್ದೀರಿ, ಅದಕ್ಕೆ ಕ್ರಮ ಕೈಗೊಳ್ಳಿ ಎಂದು ಒತ್ತಾಯ ಮಾಡುತ್ತೇನೆ. ಇನ್ನು ಎರಡು-ಮೂರು ದಿವಸಗಳಲ್ಲಿ ಹಣ ರೈತರಿಗೆ ಮುಟ್ಟಬೇಕೆಂಬುದು ನಮ್ಮ ಕಳಕಳಿ ಇದೆ. ತಾವು ಇದಕ್ಕೆ ವ್ಯವಸ್ಥೆ ಮಾಡಬೇಕು, ಇನ್ನು ಪಂಪ್ ಸೆಟ್ ಗಳಿಗೆ ವಿದ್ಯುತ್ ಡಿಸ್ ಕನೆಕ್ಟ್ ಮಾಡುವಂಥಾದ್ದನ್ನು ನಿಲ್ಲಿಸಿದ್ದೇವೆಂದು ಹೇಳಿದ್ದಾರೆ, ಮತ್ತೆ 15 ಸಾವಿರ, 20 ಸಾವಿರ ರೂಪಾಯಿಗಳ ಬಾಕಿ ಇರುವಂತಹವರ ವಿದ್ಯುತ್ ಡಿಸ್-ಕನೆಕ್ಟ್ ಮಾಡುವಂಥಾದ್ದು ನಿಲ್ಲಿಸಬೇಕೆಂದು ಒತ್ತಾಯ ಮಾಡಿದ್ದೇವೆ.

ಅದಕ್ಕೆ ಸರ್ಕಾರವೂ ಸ್ಪಂದನೆ ಮಾಡಿದೆ. ಅದಕ್ಕೆ ಇವತ್ತು ಆದೇಶವನ್ನು ಕೊಡತ್ತೇವೆಂದು ಹೇಳಿದ್ದಾರೆ, ಮತ್ತೆ ಅನಧಿಕೃತ ಪಂಪ್‌ಸೆಟ್‌ಗಳು ಏನಿದೆ ಅದನ್ನು ಅಧಿಕೃತವನ್ನಾಗಿ ಮಾಡುವುದಕ್ಕೆ ಕೆಲವೊಂದು ಸ್ಕೀಮ್‌ಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇನ್ನು ಬರಗಾಲದ ಕಾಮಗಾರಿಯ ಬಗ್ಗೆ ನೂರು ಕೋಟಿ ರೂಪಾಯಿಗಳಲ್ಲಿ 45 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಈ ಹಣವನ್ನು ತತ್ ತಕ್ಷಣ, ಯಾವಾಗ ಅವಶ್ಯಕತೆ ಬರುತ್ತದೆ, ಆಗದು ಒಂದು ವಾರದಲ್ಲಿರಬಹುದು, ಎರಡು ದಿವಸದಲ್ಲಿ ಇರಬಹುದು, ಅದನ್ನು ತಕ್ಷಣ ಬಿಡುಗಡೆ ಮಾಡುತ್ತೇರೆಂದು ಹೇಳಿದ್ದೀರಿ. ಈ ವಿಚಾರವಾಗಿ ನಿಜವಾಗಿ ಹೇಳಬೇಕೆಂದರೆ ಅದು ತಾಲ್ಲೂಕು ಮಟ್ಟದಲ್ಲಿರಬಹುದು, ಗ್ರಾಮೀಣ ಮಟ್ಟದಲ್ಲಿರಬಹುದು, ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗುತ್ತಿದೆ. ದನಕರುಗಳು ಕಸಾಯಿಖಾನೆಗೆ ಹೊಗುತ್ತಿವೆ, ಅದನ್ನು ತಕ್ಷಣ ನಿಲ್ಲಿಸುವಂತಹ ಕೆಲಸವನ್ನು ನಿಮ್ಮ ಅಧಿಕಾರಿಗಳಿಗೆ ಹೇಳಿ ತಕ್ಷಣವೇ ಈ ಬಗ್ಗೆ ಕ್ರಮ ಕೈಗೊಳ್ಳಬೇಕು, ಮತ್ತೆ ಕುಡಿಯುವ ನೀರಿನ ಬಗ್ಗೆ ತತ್ ತಕ್ಷಣವೇ ಕೆಲಸವಾಗಬೇಕು. ನೀವು ಹಣವನ್ನು ಬಿಡುಗಡೆ ಮಾಡುವಂಥಾದ್ದು ತಕ್ಷಣವೇ ಆಗಬೇಕು, ಮತ್ತೆ ಎಲ್ಲಾ ಕೆಲಸಗಳನ್ನು ಮಾಡುತ್ತೀರಿ, ಆದರೆ ಅಲ್ಲಿ ಏನೂ ಕೆಲಸವಾಗುವುದಿಲ್ಲ. ಇನ್ನೂ ಹೀಗೆ ಒಂದೆರಡು ತಿಂಗಳು ಬಿಟ್ಟರೆ ಏನೂ ಕೆಲಸವಾಗುವುದಿಲ್ಲ. ಅದುದರಿಂದ ಇದನ್ನು ಅನುಷ್ಠಾನಗೊಳಿಸಬೇಕೆನ್ನುವಂಥಾದ್ದು ಮುಖ್ಯವಾದ ವಿಚಾರವಾಗಿದೆ. ಅಲ್ಲಿ ಕೆರೆಗಳು ಬತ್ತಿ ಹೋಗುತ್ತಿವೆ, ಅದರ ಬಗ್ಗೆ ತಾವು ಏನು ಮಾಡುತ್ತೀರಿ, ಮತ್ತೆ ದನಕರುಗಳು ಕಸಾಯಿಖಾನೆಗೆ ಹೋಗುವಂಥಾದ್ದನ್ನು ನಿಲ್ಲಿಸುವಂಥಾದಕ್ಕೆ, ಮತ್ತೆ ರೈತರಿಗೆ ಮನಸ್ಥೈರ್ಯ ಬರುವಂಥಾದಕ್ಕೆ ಏನು ಮಾಡುತ್ತೀರೆಂಬುದು ಮುಖ್ಯವಾಗಿದೆ. ಇವತ್ತು ಗೋಶಾಲೆಗಳನ್ನು ತೆಗೆಯಬೇಕಾಗುತ್ತದೆಂಬುದು ಮತ್ತೆ ಆ ದನಕರುಗಳಿಗೆ ಮೇವು ಕೊಡಬೇಕಾದಂಥಾದ್ದನ್ನು ಮಾಡಬೇಕಾಗುತ್ತದೆ. ನಾವು ಪತ್ರಿಕೆಗಳಲ್ಲಿ ದಿನ ನಿತ್ಯ ದನಕರುಗಳು ಕಸಾಯಿಖಾನೆಗೆ ಹೋಗುತ್ತಿರುವಂಥಾದ್ದು ನೋಡುತ್ತಿದ್ದೇವೆ. ಇದರ ಬಗ್ಗೆ ತಾವು ತಕ್ಷಣವೇ ವ್ಯವಸ್ಥೆ ಮಾಡಬೇಕಾಗುತ್ತದೆ. ಆ ಬಗ್ಗೆಯು ವ್ಯವಸ್ಥೆ ತಕ್ಷಣ ಆಗಬೇಕು ಇಲ್ಲದಿದ್ದರೆ ಸದನದಲ್ಲಿ ಘೋಷಣೆ ಮಾಡುವುದು, ಅಲ್ಲಿ ಹಣ ಹೋಗುವುದಿಲ್ಲ, ಕೆಲಸಗಳು ಸರಿಯಾಗದಿರುವುದು ಇವೆಲ್ಲಾ ಆಗುತ್ತವೆ. ಇವತ್ತು ಶಾಸಕರಾಗಿ ಚುನಾಯಿತರಾದ ಶಾಸಕರ ಹತ್ತಿರ ಇಡೀ ತಾಲ್ಲೂಕಿನ ಮಾಹಿತಿ ಕ್ಷೇತ್ರದ ವಿವರ ಅವರ ಹತ್ತಿರವಿರುತ್ತದೆ, ಅಧಿಕಾರಿಗಳು ಶಾಸಕರ ಮಾರ್ಗದರ್ಶನದಲ್ಲಿ ಎಲ್ಲಿ ಕೆಲಸ ಜರೂರೂ ಆಗಬೇಕು ಎನ್ನುವುದನ್ನು ತಿಳಿದುಕೊಂಡು ಕೆಲಸ ಮಾಡಲು ಸರ್ಕಾರ ಅಧಿಕಾರಿಗಳಿಗೆ ನಿರ್ದಿಷ್ಟ ನಿರ್ದೇಶನವನ್ನು ಕೊಡಬೇಕು; ಇದು ಒಳ್ಳೆಯ ಸೂಚನೆ ಎಂದು ನಾನು ಹೇಳಬಯಸುತ್ತೇನೆ. ಇವತ್ತು ಪ್ರಮುಖ ಬೇಡಿಕೆಗಳಾದ ಬಡ್ಡಿ ಮನ್ನಾ ಮಾಡುವುದು, ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡುವುದು ಇರಬಹುದು, ಮೊನ್ನೆಯ ದಿವಸ ಸಹಕಾರ

ಮಂತ್ರಿಗಳು ಮಾತನಾಡುವಾಗ, ಶೇಕಡ 70 ರಷ್ಟು ಸಾಲ ವಸೂಲಾತಿಯಾಗಿಲ್ಲವೆಂದು ನಾವು ಹೇಳಿದೆವು. ಏಕೆಂದರೆ, ಇವತ್ತು ಅಧಿಕಾರಿಗಳು ಕೊಟ್ಟ ದಾಖಲೆಗಳನ್ನು ಒಪ್ಪಿಕೊಳ್ಳುತ್ತೇವೆ, ಆದರೆ ನಿಜವಾಗಿಯೂ ಏನು ನಡೆಯುತ್ತಿದೆ ಎಂಬುದು ಸರ್ಕಾರಕ್ಕೂ ಗೊತ್ತಿದೆ ನಮಗೂ ಗೊತ್ತಿದೆ, ನಿಜವಾಗಿಯೂ ರೈತರು ಸೊಸೈಟಿಗಳಿಗೆ ಹಣ ತುಂಬಿರುವುದು ಶೇಕಡ ಹೆಚ್ಚಿಗೆ ಎಂದರೆ 25 ರಷ್ಟು ಮಾತ್ರವಾಗಿದೆ. ಉಳಿದಿದ್ದಕ್ಕೆ ಕಳೆದ ಐದಾರು ವರ್ಷಗಳಿಂದ ಈ ಬುಕ್ ಅಡ್ಜೆಸ್ಟ್‌ಮೆಂಟ್ ಮಾಡುತ್ತಾ ಹೋಗುತ್ತಿದ್ದಾರೆ, ಆ ಪ್ರಕಾರ ಶೇಕಡ 70ರಷ್ಟು ಆಗಿದೆ. ಮೊನ್ನೆ ಮಾನ್ಯ ಯಾವಗಲ್‌ರವರು ಬಂದಾಗ ರೋಣ ತಾಲ್ಲೂಕಿಗೆ ಸಂಬಂಧಿಸಿದಂತೆ ನಾಲ್ಕು ಸಾವಿರ ಅಸಲನ್ನು ತೆಗೆದುಕೊಂಡಿದ್ದು, ಚಕ್ರಬಡ್ಡಿ ಎಲ್ಲಾ ಸೇರಿಕೊಂಡು ಇವತ್ತು ಅಸಲು ಸುಮಾರು ನಲವತ್ತು ಸಾವಿರ ರೂಪಾಯಿಗಳನ್ನು ಆ ರೈತ ಕೊಡುವಂತಹ ಪರಿಸ್ಥಿತಿ ಬಂದಿದೆ. ನಾಲ್ಕು ಸಾವಿರ ಕೊಡದವ ನಲವತ್ತು ಸಾವಿರ ರೂಪಾಯಿಗಳನ್ನು ಹೇಗೆ ಕೊಡಲು ಸಾಧ್ಯ ಎಂಬುದು ಪರಿಸ್ಥಿತಿ ಇವತ್ತು ಇದೆ. ಬಡ್ಡಿ ಮನ್ನ ಮಾಡಬೇಕು, ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಮಾಡಬೇಕೆಂದು ಇದರ ಸಲುವಾಗಿ ನಾವು ಒತ್ತಾಯ ಮಾಡಿದ್ದು. ಇನ್ನು ಹತ್ತು ದಿವಸವಾದರೂ ಮುಂದಿನ ದಿವಸಗಳಲ್ಲಿ ಬರುವ ಮುಂಗಾರು ಮಳೆ ಬಾರದಿದ್ದರೆ ಬಹುಶಃ ನನಗನ್ನಿಸುವಂತೆ ಈ ಶತಮಾನದಲ್ಲೇ ಕಾಣದಂತಹ ದೊಡ್ಡ ಬರಗಾಲ ಬರುತ್ತದೆ. ಆದುದರಿಂದ ಕಾಮಾಗಾರಿಗಳನ್ನು ಹೆಚ್ಚು ತೆಗೆದುಕೊಳ್ಳಿ ಇನ್ನು ಹೆಚ್ಚು ಹಣವನ್ನು ಬಿಡುಗಡೆ ಮಾಡಿ ಎಂದು ನಾನು ಒತ್ತಿ ಹೇಳುತ್ತಿದ್ದೇನೆ. ಇವತ್ತು ರೈತರ ಸಾಲದ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ನಾವೇನು ಹೇಳುತ್ತಿದ್ದೇವೆ ಅದಕ್ಕೆ ನಾವು ಬದ್ಧರಾಗಿದ್ದೇವೆ, ಈ ಬಗ್ಗೆ ನಮ್ಮ ಶಾಸಕ ಮಿತ್ರರೊಡನೆ ಸಾಕಷ್ಟು ಚರ್ಚೆಯಾಯಿತು. ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವವರೆಗೆ ಈ ಧರಣಿಯನ್ನು ಮುಂದುವರೆಸಬೇಕೆನ್ನುವುದು ನಮ್ಮ ಹಾಗೂ ಅವರ ಅಭಿಪ್ರಾಯವಿದೆ; ಆದರೆ ನಮ್ಮ ಒಂದು ಕಳಕಳಿ ಏನೆಂದರೆ, ಈ ಒಂದು ಸದನ ಗೌರವಯುತವಾದುದು, ರೈತರ ಬಗ್ಗೆ ಕಳಕಳಿ ಇರುವ ಸದನ, ಇದರ ಜೊತೆಗೆ ಇನ್ನೂ ಹಲವಾರು ವಿಷಯಗಳು ಇಲ್ಲಿ ಚರ್ಚೆಗೆ ಬರಬೇಕಾಗಿದೆ. ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೆಚ್ಚು ಚರ್ಚೆ ಮಾಡಿ, ಹೆಚ್ಚು ಒತ್ತಡವನ್ನು ಸರ್ಕಾರದ ಮೇಲೆ ನಾವು ತರುತ್ತೇವೆ, ಹಾಗೆ ಇನ್ನೂ ಹಲವಾರು ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವುದಕ್ಕೆ ಸಾಧ್ಯವಿದೆ, ಆ ಒಂದು ಸದುದ್ದೇಶದಿಂದ ಇವತ್ತು ನಾವು ಸರ್ಕಾರಕ್ಕೆ ಸಹಕಾರ ಕೊಡುತ್ತಿದ್ದೇವೆ. ಸಾಲದ ಮೇಲಿನ ಬಡ್ಡಿ ಮನ್ನವಾಗಲೇ ಬೇಕು, ಅಲ್ಪಾವಧಿ ಸಾಲ ದೀರ್ಘಾವಧಿ ಸಾಲವಾಗಬೇಕೆನ್ನುವ ನಮ್ಮ ಬೇಡಿಕೆ ಇದ್ದೇ ಇದೆ, ನಾವು ಈ ಬೇಡಿಕೆಯನ್ನು ಬಿಟ್ಟು ಕೊಟ್ಟಿಲ್ಲ. ಬರುವ ದಿನಗಳಲ್ಲಿ ಸರ್ಕಾರದ ನೀತಿ, ಸರ್ಕಾರ ತೆಗೆದುಕೊಳ್ಳುವ ಕಾರ್ಯಕ್ರಮಗಳ ಆಧಾರದ ಮೇಲೆ ನಾವು ಮತ್ತೆ ನಮ್ಮ ಹೋರಾಟವನ್ನು ಮುಂದುವರೆಸುತ್ತೇವೆ. ಸರ್ಕಾರ ನಮ್ಮ ಬೇಡಿಕೆಯನ್ನು ಮನ್ನಿಸದಿದ್ದರೆ ಸದನದ ಒಳಗೆ ಹಾಗೂ ಹೊರಗೆ ನಮ್ಮ ಹೋರಾಟವನ್ನು ಮುಂದುವರೆಸುತ್ತೇವೆ. ಇವತ್ತು ಕೆಲವೊಂದು ಬೇಡಿಕೆಗಳಿಗೆ ಸರ್ಕಾರದ ಸ್ಪಂದಿಸಿದೆ, ಈ ಬಡ್ಡಿ ಮನ್ನಾ ಮಾಡುವುದರಿಂದ ಸರ್ಕಾರಕ್ಕೆ ಬಹಳ ದೊಡ್ಡ ಹೊರೆಯಾಗುವುದಿಲ್ಲ, ಇದನ್ನು ಜಾರಿಗೆ ತೆಗೆದುಕೊಂಡು ಬಂದರೆ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ, ಹಾಗೂ ಜನರು ಸರ್ಕಾರಕ್ಕೆ ಒಳ್ಳೆಯ ಆಶೀರ್ವಾದ ಮಾಡುತ್ತಾರೆ, ಆದಕ್ಕಾಗಿ ಬಡ್ಡಿ ಮನ್ನಾ ಮಾಡುವ

ಬೇಡಿಕೆಯನ್ನು ಪುನರ್ ಪರಿಶೀಲನೆ ಮಾಡಿ ಈಡೇರಿಸಬೇಕೆಂದು ನಾನು ಹೇಳಬಯಸುತ್ತೇನೆ. ಈ ಸದನ ನಡೆಯಬೇಕು, ಹೊಸ ಸದಸ್ಯರು ಬಂದಿದ್ದಾರೆ ಬೇರೆ ಬೇರೆ ವಿಚಾರಗಳು ಚರ್ಚೆಯಾಗುವುದಿದೆ ಆ ದೃಷ್ಟಿಕೋನವನ್ನಿಟ್ಟುಕೊಂಡು ಇವತ್ತು ಸಹಕಾರ ಕೊಡುತ್ತಿದ್ದೇವೆ, ಆದರೆ ಬಡ್ಡಿ ಮನ್ನಾ ಮಾಡುವ ನಮ್ಮ ಹೋರಾಟದ ಹಕ್ಕನ್ನು ನಾವು ಕಾದಿರಿಸಿಕೊಂಡಿದ್ದೇವೆ, ಮುಂದಾದರೂ ಈ ಬಗ್ಗೆ ನಾವು ಹೋರಾಟ ಮಾಡುತ್ತೇವೆ, ಈಗ ಕೆಲವೊಂದು ಬೇಡಿಕೆಗಳನ್ನು ಸರ್ಕಾರ ಈಡೇರಿಸಿದರ ಬಗ್ಗೆ ನಾವು ಸಹಕಾರ ಕೊಡುತ್ತಿದ್ದೇವೆ, ಈ ಬಗ್ಗೆ ಇನ್ನೂ ಹಿರಿಯ ನಾಯಕರು ಮಾತಾಡುವವರಿದ್ದಾರೆ, ಇನ್ನು ಸದನದ ಕಾರ್ಯಕಲಾಪವನ್ನು ಮುಂದುವರೆಸಬಹುದು.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :— ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಬಹಳ ಬುದ್ಧಿವಂತರು, ಉತ್ತರ ಕೊಡುವ ಸಂದರ್ಭದಲ್ಲಿ ಕೇಂದ್ರ ಸರ್ಕಾರವನ್ನು ಸ್ವಲ್ಪ ಟೀಕೆ ಮಾಡಿ, ನಾವು ಮಾಡಿದ ಧರಣಿಯನ್ನು ಕೂಡ ಸ್ವಲ್ಪ ಟೀಕೆ ಮಾಡಿ ಬಹಳ ಜಾಣತನದಿಂದ ಉತ್ತರವನ್ನು ಕೊಟ್ಟಿದ್ದಾರೆ. ಅದೇನೇ ಇರಲಿ ಇವತ್ತು ತಾವು ಮಧ್ಯಸ್ಥಿಕೆಯನ್ನು ವಹಿಸಿ ಮಾನ್ಯ ಕಂದಾಯ, ಕಾನೂನು ಹಾಗೂ ಸಂಸದೀಯ ವ್ಯವಹಾರ ಹಾಗೂ ಸಹಕಾರ ಸಚಿವರುಗಳು ಕರೆಯಿಸಿ ಮಾತುಕತೆ ಮಾಡಿ ಮಾನ್ಯ ಮುಖ್ಯಮಂತ್ರಿಗಳ ಮನಸ್ಸನ್ನು ಒಲಿಸುವುದರಲ್ಲಿ ತಾವು ಹಾಗೂ ಈ ಸದನ ಯಶಸ್ವಿಯಾಗಿದೆ, ತಮಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅನೇಕ ಸಂದರ್ಭಗಳಲ್ಲಿ ಧರಣಿ ಮಾಡಬೇಕು, ಸತ್ಯಾಗ್ರಹ ಮಾಡಬೇಕು ಎನ್ನುವ ಮನಸ್ಸು ನಮಗಿರುವುದಿಲ್ಲ. ಇದೇ ಉತ್ತರವನ್ನು ಬಹುಶಃ ಶುಕ್ರವಾರ ಕೊಟ್ಟಿದ್ದರೆ ಈ ಸದನದ ಕಾಲವನ್ನು ಉಳಿಸಬಹುದಾಗಿತ್ತು. ಅದೇನೇ ಇದ್ದರೂ, ಸರ್ಕಾರ ಮೆಕ್ಕೆಜೋಳಕ್ಕೆ ಸಂಬಂಧಿಸಿದಂತೆ ಬಾಕಿ ಐದೂವರೆ ಕೋಟಿ ರೂಪಾಯಿಗಳನ್ನು ಕೊಡುವುದು, ಕುಡಿಯುವ ನೀರಿಗೆ ನೂರು ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಕೊಟ್ಟಿರುವ ಭರವಸೆಯನ್ನು, ಡಿಸ್-ಕನೆಕ್ಷನ್ ಡ್ರೈವ್ ಅನ್ನು ಕೂಡಲೇ ನಿಲ್ಲಿಸುವುದನ್ನು, ಗ್ರೇ ಹಾಗೂ ಡಾರ್ಕ್ ಏರಿಯಾಗಳಿಗೆ ನೀರು ಬಿದ್ದರೆ ವಾಟರ್ ಕನೆಕ್ಷನ್ ಕೊಡುವುದು, ತತ್ಕಾಲ್ ಯೋಜನೆಯನ್ನು ಸಂಪೂರ್ಣವಾಗಿ ಕೈಬಿಟ್ಟಿರುವುದನ್ನು, ಸರ್ಕಾರಕ್ಕೆ ಇಷ್ಟವಾದ 15 ಅಂಶಗಳ ಕಾರ್ಯಕ್ರಮಗಳನ್ನು ಅವರೇನು ಘೋಷಣೆ ಮಾಡಿದ್ದಾರೆ, ಇದನ್ನು we agree to disagree. ಏಕೆಂದರೆ, ನಮ್ಮ ಮುಖ್ಯ ಬೇಡಿಕೆ ಸಾಲದ ಮೇಲಿನ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡುವುದು, ಇದನ್ನು ನಬಾರ್ಡ್‌ನವರು ಒಪ್ಪುತ್ತಾರೆ, ರೈತರು ತುಂಬಾ ಕಷ್ಟದಲ್ಲಿದ್ದಾರೆ ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಮಾಡಬೇಕು, ಇವತ್ತೂ ಕೂಡ ಆ ಮಾತನ್ನು ಹೇಳುತ್ತಿದ್ದೇವೆ. ಸದನವು ಆಗಸ್ಟ್ ಮೊದಲನೆ ವಾರದವರೆಗೆ ನಡೆಸಬಹುದೆಂದು ನಾನು ತಿಳಿದುಕೊಂಡಿದ್ದೇನೆ, ಪರಿಸ್ಥಿತಿ ದಿನೇ ದಿನೇ ಗಂಭೀರವಾಗದಿರಲೆಂಬುದು ನಮ್ಮ ಆಸೆ. ಈಗಲಾದರೂ ಕೂಡ ಹಿಂಗಾರು ಮಳೆ ಬಿದ್ದು ರಾಜ್ಯದಲ್ಲಿ ಸಂವೃದ್ಧಿಯನ್ನು ತರಲೆಂದು ಭಗವಂತನಲ್ಲಿ ನಾವೂ ಕೇಳಿಕೊಳ್ಳುತ್ತೇವೆ.ಒಂದು ಪಕ್ಷ ಅದಾಗದಿದ್ದರೆ ಪರಿಸ್ಥಿತಿಯನ್ನು ತರಲೆಂದು ಭಗವಂತನಲ್ಲಿ ನಾವು ಕೇಳಿಕೊಳ್ಳುತ್ತೇವೆ. ಒಂದು ಪಕ್ಷ ಅದಾಗದಿದ್ದರೆ

ಪರಿಸ್ಥಿತಿ ಭೀಕರವಾಗುತ್ತದೆ, ರೈತರ ಪರವಾಗಿರುವ ಹಾಗೂ ಬರಗಾಲ ಪ್ರದೇಶಗಳ ಕಾಮಗಾರಿಗಳ ಬಗ್ಗೆ ಇರುವ ನಮ್ಮ ಹೋರಾಟವನ್ನು ನಾವು ಮುಂದುವರಿಸುತ್ತೇವೆ. ಇವತ್ತು ತಾವು ಮಧ್ಯಸ್ತಿಕೆಯನ್ನು ವಹಿಸಿ ಸರ್ಕಾರ ಹಾಗೂ ಮುಖ್ಯಮಂತ್ರಿಗಳ ಮನಸ್ಸನ್ನು ಒಲಿಸುವುದರಲ್ಲಿ ತಾವು ಹಾಗೂ ಸದನ ಯಶಸ್ವಿಯಾಗಿದೆ, ಮುಂದಾದರೂ ಕೂಡ ಸರ್ಕಾರ ವಿರೋಧಪಕ್ಷದವರು ಕೇಳುವ ಕನಿಷ್ಟ ವಿಚಾರಗಳಿಗೆ ಸ್ಪಂಧಿಸಿದರೆ ಬಹಳ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಿ ಮತ್ತೊಮ್ಮೆ, ಸಹಕಾರ, ಕಂದಾಯ ಹಾಗೂ ಸಂಸದೀಯ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಈ ಸದನದ ಕಾರ್ಯಕಲಾಪ ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇದನ್ನು ಅನಿವಾರ್ಯವಾಗಿ ಧರಣಿ ಮಾಡಿದ್ದು, ಉದ್ದೇಶಪೂರ್ವಕವಾಗಿ ಮಾಡಿದ್ದಲ್ಲ, ಆದುದರಿಂದ ನಿಮಗೆ ವಿಶೇಷವಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸಿ, ನಾವು ರೈಟ್ ಟು ಪ್ರೊಟೆಸ್ಟ್ ಅನ್ನು ಸಾಲದ ಮೇಲೆ ಬಡ್ಡಿ ಮನ್ನಾ ಇತ್ಯಾದಿ ವಿಚಾರಗಳಲ್ಲಿ ಮುಂದುವರಿಸಿಕೊಂಡು ಹೋಗುತ್ತೇವೆ. ಇವತ್ತು ಉತ್ತರ ಕರ್ನಾಟಕದಲ್ಲಿ ದನಕರುಗಳ ಮೇವಿಗಾಗಿರುವ ತೊಂದರೆ, ಕೂಲಿ ಸಿಗದಿರುವ ವಿಚಾರಗಳಲ್ಲಿ ಬಹಳಷ್ಟು ಶಾಸಕರು ನೊಂದಿದ್ದಾರೆ ಹಾಗೂ ಆಡಳಿತ ಪಕ್ಷದವರೂ ಕೂಡ ನೊಂದಿದ್ದಾರೆ ಈ ಕಡೆ ಸರ್ಕಾರ ಗಮನಕೊಡಲೆಂದು ಮತ್ತೊಮ್ಮೆ ಒತ್ತಾಯ ಮಾಡಿ ಮಾನ್ಯ ಗೌರವಾನ್ವಿತ ಸದಸ್ಯರೆಲ್ಲಾ ತಮ್ಮ ಸ್ಥಾನಕ್ಕೆ ಹಿಂತಿರುಗಬೇಕೆಂದು ನಾನು ನಮ್ಮ ಹಾಗೂ ವಿರೋಧ ಪಕ್ಷದ ಮಿತ್ರರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

+ಶ್ರೀ ಸಿ. ಬೆನ್ನಿಗಪ್ಪ (ಕೊರಟಗೆರೆ) :— ಮಾನ್ಯ ಅಧ್ಯಕ್ಷರೆ, ಕೊನೆಗೂ ತಮ್ಮ ಅಧ್ಯಕ್ಷತೆಯಲ್ಲಿ ವಿರೋಧಪಕ್ಷದ ನಾಯಕರನ್ನು ಕರೆಯಿಸಿ ತಮ್ಮ ಸಂಧಾನದ ಮುಖೇನ ರಾಜ್ಯದ ಜನತೆಗೆ ಕೇಬಿ ಅಥವಾ ಸಾಲದ ಮೇಲಿನ ಬಡ್ಡಿ ಮನ್ನ ವಿಚಾರವಾಗಿರಬಹುದು ಅಥವಾ ತತ್ಕಾಲ್ ಯೋಜನೆಯನ್ನು ಮಾಪಸ್ ತೆಗದುಕೊಂಡ ವಿಚಾರವಾಗಿರಬಹುದು, ನೂರು ಕೋಟಿಗೆ ಹೆಚ್ಚಿನ ಕಾಮಗಾರಿ ಕೆಲಸ ಮಾಡುವ ವಿಚಾರವಾಗಿರಬಹುದು, ಮೆಕ್ಕೆ ಜೋಳಕ್ಕೆ ಸಂಬಂಧಿಸಿದಂತೆ ರೈತರಿಗೆ ಕೊಡಬೇಕಾದ ಹಣವನ್ನು ಸಂಪೂರ್ಣವಾಗಿ ಕೊಡುತ್ತೇವೆಂದು ಸರ್ಕಾರ ಹೇಳಿರುವುದನ್ನು ಸ್ವಾಗತ ಮಾಡುತ್ತೇವೆ. ನಾವೇನು ಧರಣಿಯನ್ನು ಮಾಡಿದ್ದೇವೆಯೋ ಅದನ್ನು ರಾಜ್ಯದ ಜನತೆಯ ಉದ್ದೇಶದಿಂದ ಮಾಡಲಾಗಿತ್ತು, ಒಂದು ಸರ್ಕಾರದ ಅಥವಾ ಪಕ್ಷದ ಧರಣಿಯಲ್ಲ. ಆದಕ್ಕೆ ಸರ್ಕಾರ ಇವತ್ತು ಉತ್ತಮವಾದ ಉತ್ತರವನ್ನು ಕೊಟ್ಟಿದೆ ಅದನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(3) ಪ್ರಶ್ನೋತ್ತರ

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಪಶುವೈದ್ಯ ಚಿಕಿತ್ಸಾಲಯಗಳನ್ನು ತೆರೆಯುವುದು.

243(1863) ಶ್ರೀ ಗೋಪಾಲ್ ಪೂಜಾರಿ ಕೆ. (ಬೈಂದೂರು) :— ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

4 – A